ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 3, November-December 2024, Pp. 1-5
©*IIMRD*, Mysuru

IIMRD JOURNALS
www.iimrd.com

# ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಸಾಮಾಜಿಕ ಬದಲಾವಣೆ ಅಗತ್ಯವಾದ ಆಧುನಿಕ ಮನೋಧರ್ಮ

**ನಂಜುಂಡಸ್ವಾಮಿ ಎಸ್[1] ಮತ್ತು ಬಿ.ಎಂ.ಗೀತಾಂಜಲಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ,
ಮುಕ್ತಗಂಗೋತ್ರಿ, ಮೈಸೂರು.

**ಸಾರಾಂಶ: (Abstract)**

*ಕನ್ನಡ ಸಾಹಿತ್ಯ ಸಾಂಸ್ಕೃತಿಕವಾಗಿ ಮತ್ತು ಐತಿಹಾಸಿಕವಾಗಿ ಪುರಾತನವಾದದ್ದು ಕನ್ನಡ ಭಾಷೆ ಇತರೆ ಭಾಷೆಗಳಿಗಿಂತ ಇತಿಹಾಸದಲ್ಲಿ ತನ್ನ ನೆಲೆಯನ್ನು ಕ್ರಿ.ಶ.450 ರ 'ಹಲ್ಮಿಡಿ ಶಾಸನ'ದಲ್ಲಿ ದಾಖಲಿಸುತ್ತದೆ. ಕ್ರಿ.ಶ.450ರಿಂದ ಪ್ರಾರಂಭವಾಗಿ ಜೈನ ಸಾಹಿತ್ಯದ ಮೂಲಕ ಪ್ರಬುದ್ಧಮಾನಕ್ಕೆ ಬಂದು 12ನೇ ಶತಮಾನದಲ್ಲಿ ವಚನ ಸಾಹಿತ್ಯದಲ್ಲಿ ಸರಳ ಸಾಹಿತ್ಯವು ಜನ ಸಾಮಾನ್ಯರ ಮೆಚ್ಚುಗೆಯನ್ನು ಪಡೆದು, ತದ ನಂತರ ಸಾಹಿತ್ಯ ವಿಸ್ತಾರವಾದ ವ್ಯಾಪ್ತಿಯನ್ನು ಪಡೆದುಕೊಂಡಿತು. ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರ ಪ್ರಾರಂಭದಲ್ಲಿ ಅನುವಾದದ ಮೂಲಕ ಪ್ರವೇಶ ಪಡೆದು, ನಂತರದ ಕಾಲಮಾನದಲ್ಲಿ ಸ್ವಾತಂತ್ರ್ಯವಾಗಿ ರಚನೆಯಾದವು. ಸಾಮಾಜಿಕ ವ್ಯವಸ್ಥೆಯೂ ಈ ಎಲ್ಲಾ ನೆಲೆಗಟ್ಟಿನಲ್ಲಿ ಪುರುಷ ಪ್ರಧಾನವಾದ ನೆಲೆಗಟ್ಟಿನಲ್ಲಿ ಅಭಿವ್ಯಕ್ತಗೊಂಡಿದ್ದು ಸಾಮಾಜಿಕ ಬದಲಾವಣೆಗೆ ಆಧುನಿಕದ ಮನೋಧರ್ಮ ಅವಶ್ಯಕವಾದದ್ದು ಎಂಬುದು ಇಲ್ಲಿನ ಮುಖ್ಯ ಉದ್ದೇಶ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಸಾಹಿತ್ಯ ವಿಮರ್ಶೆ, ಸಾಮಾಜಿಕ ವ್ಯವಸ್ಥೆ, ಆಧುನಿಕ ಮನೋಧರ್ಮ.

**ಪೀಠಿಕೆ**

ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆಯಾಗದೆ ಲಿಂಗ ತಾರತಮ್ಯವನ್ನು ನಿರ್ಮೂಲನ ಮಾಡುವುದು ಕಷ್ಟ ಸಾಧ್ಯ. ಪುರಾತನ ಕಾಲದಿಂದಲೂ ಸಾಮಾಜಿಕವಾಗಿ ದ್ವಿತೀಯ ದರ್ಜೆಯ ವ್ಯಕ್ತಿಯಾಗಿ ಮಹಿಳೆಯರನ್ನು ಕಾಣಲಾಗುತ್ತದೆ. ಮಹಿಳೆಯು ಪುರುಷನ ಆಶ್ರಯದಲ್ಲಿಯೇ ನೆಲೆಯನ್ನು ಕಂಡುಕೊಳ್ಳಬೇಕು. ಅವಳು ಹುಟ್ಟಿನಿಂದಲೇ ಕಳಂಕಿತಳು. ಹೆಣ್ಣಾಗಿ ಜನಿಸಿದವಳು ಮೋಕ್ಷ ಪಡೆಯಲಾರದವಳು. ಮೋಕ್ಷ ಪಡೆಯಲು ಅರ್ಹವಾದ ಪುರುಷ ವರ್ಗದ ಸೇವೆಗಾಗಿ ಮುಡುಪಿಡ ಬೇಕೆಂಬ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಂಡು ಮಹಿಳೆಯರನ್ನು ಪುರುಷರ ಸೇವೆಗಾಗಿಯೇ

*Please cite this article as:* ನಂಜುಂಡಸ್ವಾಮಿ. ಎಸ್ ಮತ್ತು ಬಿ.ಎಂ.ಗೀತಾಂಜಲಿ. (2024). ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಸಾಮಾಜಿಕ ಬದಲಾವಣೆ ಅಗತ್ಯವಾದ ಆಧುನಿಕ ಮನೋಧರ್ಮ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 1–5

ಸಂಬಳ ರಹಿತ ದುಡಿಮೆ ವರ್ಗದವರಾಗಿ ನಡೆಸಿಕೊಂಡಿರುವುದು ನಮ್ಮ ಸಾಹಿತ್ಯಗಳಲ್ಲಿ ಕಂಡುಬರುತ್ತದೆ. ಮಹಿಳೆಯರು ಸಾಮಾಜಿಕವಾಗಿ ಹಲವಾರು ಸ್ಥಾನಗಳನ್ನು ಆಲಂಕರಿಸುತ್ತಾರೆ. ತಾಯಿಯಾಗಿ ಅಕ್ಕನಾಗಿ, ಹೆಂಡತಿಯಾಗಿ, ಮಗಳಾಗಿ, ಸೊಸೆಯಾಗಿ ಯಾವ ಸ್ಥಾನದಲ್ಲಿಯೂ ಪ್ರಧಾನ ಸ್ಥಾನವನ್ನು ಪಡೆಯಲಾಗದೆ, ಎರಡನೆಯ ಸ್ಥಾನದಲ್ಲಿಯೇ ತೃಪ್ತಿಪಡಬೇಕಾಯಿತು. ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯನ್ನು ಬಯಸಿದ ಮಹಿಳೆಯರಿಗೆ ವಸಾಹತು ಸಾಹಿತ್ಯದ ಪ್ರಭಾವದಿಂದ ಕೊಂಚ ಸ್ಥಾನಮಾನದಲ್ಲಿ ಬದಲಾವಣೆಯ ಛಾಪು ಗೋಚರವಾಯಿತು. ಸಾಮಾಜಿಕ ವ್ಯವಸ್ಥೆಯಲ್ಲಿ ಆಚಾರ ವಿಚಾರಗಳ ನೆಪವನ್ನು ಮಾಡಿಕೊಂಡು ಮನೆಯಿಂದ ಹೊರ ಬಾರದಂತೆ ಮಹಿಳೆಯರನ್ನು ಬಂಧನದಲ್ಲಿಡಲಾಯಿತು. ಶಿಕ್ಷಣದಿಂದ ವಂಚಿತಳಾಗಿ ಬಾಲ್ಯ ವಿವಾಹಕ್ಕೆ ಗುರಿಯಾಗಿ, ವಿಧವೆಯಾದರೆ ಸಮಾಜದಲ್ಲಿ ಹಲವಾರು ಕಟ್ಟುಪಾಡುಗಳನ್ನು ವಿಧಿಸಿ ಕತ್ತಲೆಯಲ್ಲಿ ಜೀವನ ನಡೆಸುವಂತೆ ನೋಡಿಸಿಕೊಳ್ಳಲಾಯಿತು. ಪ್ರಶ್ನೆ ಮಾಡಿದರೆ ಗಯ್ಯಾಳಿಯೆಂದು, ಪ್ರಮುಖವಾಹಿನಿಗೆ ಪ್ರವೇಶಿಸದಂತೆ ಸಾಮಾಜಿಕ ವ್ಯವಸ್ಥೆ ಮಹಿಳೆಯರನ್ನು ಬಂಧಿಗಳಾಗಿ ಮಾಡಲಾಗಿತ್ತು. ಈ ಬಂಧನದಿಂದ ಹೊರ ಬಂದು ಸಂಪ್ರದಾಯ, ಸಾಮಾಜಿಕ ವಿರುದ್ಧ ಹೋರಾಡಲು ಆಧುನಿಕತೆಯ ಪ್ರವೇಶವಾಗಬೇಕಾಯಿತು. ಹೆಣ್ಣಿನ ಯಾವ ಮನಸ್ಸಿನ ಭಾವನೆಗೂ ಇಲ್ಲಿ ಬೆಲೆಯಿಲ್ಲ ಎಂಬುದು ಡಾ.ಅನುಪಮ ನಿರಂಜನ ಅವರ ಮಹತ್ವದ ಕಾದಂಬರಿ **'ಮಾಧವಿ'** ಕಾದಂಬರಿಯಲ್ಲಿನ ಮಾಧವಿಯ ಸ್ಥಿತಿಯನ್ನು ಗಮನಿಸಿದಾಗ ಅರ್ಥವಾಗುತ್ತದೆ. ಗುರುದಕ್ಷಿಣೆಗಾಗಿ ಶ್ವೇತಾಶ್ವಗಳನ್ನು ಸಂಪಾದಿಸಲು ಗಾಲವ ಯಾಯತಿ ಚಕ್ರವರ್ತಿಯ ಬಳಿಗೆ ಬಂದು ಅಪೇಕ್ಷೆಯನ್ನು ತಿಳಸಿದಾಗ ಯಯಾತಿ ಚಕ್ರವರ್ತಿ ತನ್ನ ಸುಂದರವಾದ ಪುತ್ರಿ ಮಾಧವಿಯನ್ನು ಗಾಲವನ ಕೈಗೊಪ್ಪಿಸಿ ಅಶ್ವ ಸಂಪಾದನೆಗಾಗಿ ಆಕೆಯನ್ನು ಬೇಕಾದಂತೆ ಬಳಸಿಕೊಳ್ಳಬಹುದೆಂದು ಭಿನ್ನವಿಸುತ್ತಾನೆ. ಗಾಲವ ಮಾಧವಿಯನ್ನು ಬೇರೆ ಬೇರೆ ರಾಜರಲ್ಲಿ ಮಾಧವಿಯನ್ನು ಒತ್ತೆಯಾಗಿರಿಸಿ ಅಶ್ವಗಳನ್ನು ಪಡೆಯುತ್ತಾನೆ. ಚಕ್ರವರ್ತಿ ಯಯಾತಿ ತನಗೆ ಬಂದ ಸಂಕಟದಿಂದ ಪಾರಾಗಲು ಮಗಳನ್ನು ಒಪ್ಪಿಸಿದ, ಗಾಲವ ಅಶ್ವ ಸಂಪಾದನೆಗೆ ಮೂರು ರಾಜರುಗಳಿಗೆ ಒಪ್ಪಿಸಿ ಅಶ್ವ ಸಂಪಾದನೆ ಮಾಡಿದ, ವಿಶ್ವಾಮಿತ್ರನ ಆಜ್ಞೆ, ಚಕ್ರವರ್ತಿಯ ದಾನ ಗಾಲವನ ಅಶ್ವ ಸಂಪಾದನೆಯೇ ಮುಖ್ಯ ಗುರಿಯಾಗಿ ಕಂಡುಬಂದರೆ ಮಾಧವಿಯ ಅಂತರಂಗದ ಯಾತನೆ ಯಾರ ಅವಗಾಹನೆಗೂ ಬರುವುದಿಲ್ಲ. ತಂದೆಯ ಆಜ್ಞೆ ಪಾಲನೆ ಮಗಳಾದವಳ ಜವಾಬ್ದಾರಿ ಮರು ಮಾತನಾಡದೆ ಒಪ್ಪಬೇಕಾದ ಮಾಧವಿ, ಗಾಲವ ಗಂಡ ಕಂಡ ಕಂಡ ರಾಜರ ಹೆಂಡರಾಗೆಂದ ಪತಿ ವಚನ ಪಾಲನೆ ಪುರುಷವರ್ಗ ಯಾವ ಹಂತಕ್ಕೆ ಮಹಿಳೆಯನ್ನು ನಡೆಸಿಕೊಂಡಿದ್ದಾರೆಂದು ಮಾಧವಿಯ ಪಾತ್ರವೊಂದರ ಅನುಭವವೇ ಮಹಿಳಾ ವರ್ಗದ ಪ್ರತಿರೂಪವಾಗಿ ಚಿತ್ರಿತವಾಗಿದೆ. ಯಾವ ಸಂದರ್ಭದಲ್ಲಿಯೂ ಪ್ರಶ್ನೆ ಮಾಡದೆ ತಂದೆ ಮತ್ತು ಗಂಡನ ಆಜ್ಞೆ ಮಹಿಳೆಯನ್ನು ಜಡವಸ್ತುವಾಗಿರುವಂತೆ ಸಾಮಾಜಿಕ ವ್ಯವಸ್ಥೆ ಮಹಿಳೆಯರನ್ನು ನಡೆಸಿಕೊಂಡಿದೆ. ಈ ಸಾಮಾಜಿಕ ವ್ಯವಸ್ಥೆ ಬದಲಾಗಬೇಕಾದರೆ ಆಧುನಿಕತೆಯ ಮನೋಧರ್ಮವನ್ನು ಪಾಲಿಸಿದಾಗ ಮಾತ್ರ ಗಂಡು ಹೆಣ್ಣು ಸಮಾನ ಸ್ಥಾನಮಾನವನ್ನು ಪಡೆಯಲು ಸಾಧ್ಯವಾಗುತ್ತದೆ.

ಸಾಮಾಜಿಕವಾಗಿ ನಡೆದುಕೊಂಡು ಬಂದಂತ ವಿಚಾರವನ್ನು ಪುನರ್ವಿಮರ್ಶಿಸಲು ಅಥವಾ ಅದನ್ನು ಬದಲಾಯಿಸಲು ದಿಟ್ಟತನದ ಹೋರಾಟವಾಗಬೇಕು. ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಪುರುಷ ಪ್ರಧಾನವಾಗಿ ವ್ಯವಸ್ಥೆಯಿಂದ ಹೊರಬರಲು, ಪುರುಷ ಪ್ರಧಾನ ವ್ಯವಸ್ಥೆಯನ್ನು ಬದಲಿಸಲು ಶತಮಾನಗಳೇ ಕಳೆದವು. ಆದರೂ ಸಂಪೂರ್ಣವಾದ ಬದಲಾವಣೆ ಸಾಧ್ಯವಾಗಿಲ್ಲ. ೧೯೭೦ರ ನಂತರ ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ವಿಸ್ತಾರವಾಯಿತು. ವಸಾಹತು ಸಾಹಿತ್ಯದ ಪ್ರಭಾವ ಮಹಿಳೆಯ ಬಗೆಗಿನ ಕಾಳಜಿಯನ್ನು ಮನಗಂಡು ಸಾಹಿತ್ಯ ಕೃಷಿ ನಡೆಯಿತು. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರ ಮೇಲೆ ಹೇರಲಾಗಿರುವ ಹಲವಾರು ವಿಚಾರಗಳು ಈಗ ಪುನರ್ವಿಮರ್ಶಿಸಲು ಪ್ರಾರಂಭವಾಗಿದ್ದು, ಮಹಿಳೆಯರ ಬದುಕಿನ ಹೊಸ ದೃಷ್ಟಿಕೋನವೊಂದನ್ನು ಸಮಾಜ ಬಯಸಿರುವುದು ಸಮಾಧಾನಕರವಾದ ವಿಷಯವಾಗಿದೆ. ಸಾಮಾಜಿಕ ವ್ಯವಸ್ಥೆ ಮಹಿಳೆಯರ ಬಗೆಗಿನ ಆಯಾಮಗಳು ಬದಲಾಗಬೇಕು. ಧರ್ಮ, ಪರಂಪರೆ, ಮೂಢನಂಬಿಕೆಗಳಿಂದ ಹೊರಬಂದು, ಸ್ತ್ರೀ ಸಮಾನತೆಯ ಬಗೆಗಿನ ಕಾಳಜಿ ಜಾಗೃತವಾಗಬೇಕು. ಕನ್ನಡ ಕಾದಂಬರಿಗಾರ್ತಿಯಲ್ಲಿ ಮೊದಲ ಪಂಥಿಯಲ್ಲಿ ಬರುವುದು ತಿರುಮಲಾಂಬ ಸ್ವತಃ ಸಮಾಜದಿಂದ ಅಗೌರವಿಸಲ್ಪಟ್ಟು ಮಹಿಳೆಯರ ಅಭ್ಯುದಯದ ದೃಷ್ಟಿಯಿಂದ ತಮ್ಮ ಗಟ್ಟಿ ಧ್ವನಿಯಲ್ಲಿ ಸಾಹಿತ್ಯದ ಕೃಷಿ ಮಾಡಿದ್ದಾರೆ. ತಾವು ಬಾಳಿ ಬದುಕಿದ ಜೀವನದ ಸಾರವನ್ನು ಅರಗಿಸಿಕೊಂಡು ಮುಂದಿನ ಮಹಿಳಾ ಪೀಳಿಗೆಗಾಗಿ **'ಪತ್ರಿಕೆ'**ಯನ್ನು ಪ್ರಾರಂಭಿಸಿ, ಮಹಿಳೆಯರ ಬಗೆಗಿನ ಜಾಗೃತಿ ಮೂಡಿಸಿದರು. ಸಾಮಾಜಿಕತೆಯ ಬದಲಾವಣೆಯನ್ನು ತಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿ ಪ್ರತಿನಿಧಿಸಿದರು. ವಿಧವೆಯಾದವರು ಮನೆಯಿಂದ ಹೊರ ಬರಬಾರದು, ಕೇಶಮುಂಡನೆಯಾಗಬೇಕು, ವರ್ಣರಹಿತ ವಸ್ತ್ರದ ಬಳಕೆ, ಹೆಣ್ಣು ಮಕ್ಕಳಿಗೆ ಶಿಕ್ಷಣದ ನಿರಾಸಕ್ತಿ ಇವುಗಳನ್ನು ದಾಟಿ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಮಹಿಳೆಯ ಉದ್ಧಾರಕ್ಕಾಗಿ ದುಡಿದಿರುವುದು ಆಧುನಿಕತೆ ಮನೋಧರ್ಮದ ತಿರುಮಲಾಂಬಾರವರ ತಂದೆಯವರ ಮನಸ್ಥಿತಿಯಲ್ಲಿ ಬದಲಾವಣೆಯನ್ನು ತಂದಿದೆ. ಸಂಪ್ರದಾಯವನ್ನು ತೊರೆದು ಮಗಳಿಗೆ ಶಿಕ್ಷಣವನ್ನು ನೀಡಿದರು. ಶಿಕ್ಷಣದ ಫಲವಾಗಿ ಕನ್ನಡ ಸಾಹಿತ್ಯಕ್ಕೆ ತಿರುಮಲಾಂಬಾ ಅಪಾರ ಕೊಡುಗೆಯನ್ನು ಸಾಮಾಜಿಕ ಸುಧಾರಣೆಯನ್ನು ಮಾಡಿದರು. ತಿರುಮಲಾಂಬಾ ಅವರನ್ನು ಮೂಲೆಗುಂಪು ಮಾಡಿದ್ದರೆ ಮಹಿಳಾ ಕಾದಂಬರಿಗಾರ್ತಿಯ ಉದಯವಾಗುತ್ತಿರಲಿಲ್ಲ. ಸಾಹಿತ್ಯ ಕ್ಷೇತ್ರ ಅಪರಿಮಿತ ಸ್ತ್ರೀ ಕಾಳಜಿ ಹೃದಯವನ್ನು ಕಳೆದುಕೊಳ್ಳಬೇಕಾಗಿತ್ತು. ಸಾಮಾಜಿಕ ವ್ಯವಸ್ಥೆಯಲ್ಲಿನ ಕಂದಾಚಾರಗಳನ್ನು ಕಳಚಿಕೊಂಡು ಹೊಸ ಸಂಪ್ರದಾಯ ಉದಯವಾದಾಗ ಮಹಿಳೆಯರ ಸಮಾನ ಸ್ಥಾನಮಾನಗಳು ದೊರಕುತ್ತವೆ. ಕಾದಂಬರಿಗಳ ಮೂಲಕ ಮಾನವ ಸಮಾಜವನ್ನು ಪ್ರಶ್ನೆ ಮಾಡುವ ತಿರುಮಲಾಂಬಾರವರ ಮಾತುಗಳಿವು. ತಲೆಯನ್ನು ಬೋಳಿಸಿಕೊಂಡ ಮಾತ್ರಕ್ಕೆ ಪವಿತ್ರರಾಗುವರೋ ಗಂಡ ಸತ್ತ ಮಾತ್ರಕ್ಕೆ ಅವರೇನು ಮನುಷ್ಯ ಜಾತಿಯನ್ನು ಬಿಟ್ಟಂತೆಯೇ? ಎಂದು ಪ್ರಶ್ನೆ ಮಾಡುವ ಮೂಲಕ ಅಬಲೆಯರ ಪರ ಧ್ವನಿಗೂಡಿಸಿರುವುದು. ಸಾಮಾಜಿಕ ಪರಿವರ್ತನೆಯಲ್ಲಿ ಶಿಕ್ಷಣ ಆಧುನಿಕ ಮನೋಧರ್ಮ ಕೆಲಸ ಮಾಡಿದೆ.

ಸ್ತ್ರೀಯರ ಸಂವೇದನಾಶೀಲತೆ ಹೆಚ್ಚಿದಂತೆಲ್ಲ ಸಮಾಜವನ್ನು ಕಾಣುವ ದೃಷ್ಟಿಯೂ ಬದಲಾಗುತ್ತದೆ. ಮಹಿಳೆಯರನ್ನು ಶೋಷಿಸಲು ಸಮಾಜ ಹೂಡುವ ತಂತ್ರಗಳನ್ನು ಬುಡಮೇಲು ಮಾಡಿ ಶೋಷಣೆಯಿಂದ

ಹೊರಬರುವುದು. ಆಧುನಿಕ ಮನೋಧರ್ಮದಿಂದ ಸಾಧ್ಯವಾಗುತ್ತದೆ. ಸ್ತ್ರೀಯರ ಅಭ್ಯುದಯದ ದೃಷ್ಟಿಯಿಂದ ಸಾಮಾಜಿಕ ಪಿಡುಗುಗಳಿಂದ ಹೊರಬರುವ ಮನೋಭಾವ ಅಗತ್ಯವಾಗಿದೆ. ಹೊಸ ದೃಷ್ಟಿಕೋನ ಬಾಲ್ಯವಿವಾಹದಿಂದ ಹೆಣ್ಣುಮಕ್ಕಳನ್ನು ರಕ್ಷಿಸುವುದು, ಮಹಿಳಾ ಶಿಕ್ಷಣವನ್ನು ಕಡ್ಡಾಯವಾಗಿಸುವುದು. ಸ್ವತಂತ್ರ್ಯ ಬದುಕಿನ ಆಯ್ಕೆ, ಸಮಾನ ಸ್ಥಾನಮಾನಗಳು, ವಿಧವಾ ವಿವಾಹ ಹೀಗೆ ಮಹಿಳಾ ಅಭ್ಯುದಯಕ್ಕಾಗಿ ಆಧುನಿಕ ಮನೋಧರ್ಮ ಮಾರ್ಗದರ್ಶನದಲ್ಲಿ ನೀಡುವಂತಾಗಿದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರನ್ನು ಕುರಿತ ಪುರುಷ ಚಿಂತನೆಗಳೇ ಹೆಚ್ಚಾಗಿವೆ. ಮಹಿಳೆಯೆಂದರೆ ಹೇಗಿರಬೇಕು. ಅವಳ ಜೀವನ ಕ್ರಮವನ್ನು ರೂಪಿಸುವಲ್ಲಿ ತಮ್ಮ ಅಸ್ತಿತ್ವವನ್ನು ಭದ್ರವಾಗಿಸಲು ನೆರವಾಗುವಂತಹ ಅಲಿಖಿತ ಆಚರಣೆಗಳನ್ನು ರೂಪಿಸಿಕೊಂಡಿದ್ದಾರೆ. ಕುಟುಂಬಕ್ಕಾಗಿ ದುಡಿಯಬೇಕು, ಅವಳ ದುಡಿಮೆಗೆ ತಕ್ಕ ಪ್ರತಿಫಲವಿರುವುದಿಲ್ಲ, ಹೊರ ಜಗತ್ತಿನಲ್ಲಿ ಸ್ವತಂತ್ರವಾಗಿ ಭಾಗವಹಿಸುವಂತಿಲ್ಲ, ಮನೆಯ ಸದಸ್ಯರನ್ನು ಅವಲಂಬಿಸಿಕೊಂಡೆ ಹೊರಗಿನ ಸಂಪರ್ಕವನ್ನು ಪಡೆಯಬೇಕು. ಕೆಲ ಸಮುದಾಯಗಳ ಸಾಮಾಜಿಕ ವ್ಯವಸ್ಥೆಗಳು ಮಹಿಳೆಯ ಆರೋಗ್ಯದ ಮೇಲೆ ದುಷ್ಪರಿಣಾಮವನ್ನುಂಟು ಮಾಡುವಂತಹ ಆಚರಣೆಗಳನ್ನು ಅನುಸರಿಸುತ್ತವೆ. ಉದಾಹರಣೆಗೆ ಮಕ್ಕಳನ್ನು ಪಡೆಯುವುದರಲ್ಲಿ ಮಿತಿ ಇಲ್ಲದಿರುವುದು. ಹೊರ ಜಗತ್ತಿನ ಸಂಪರ್ಕಕ್ಕೆ ಬಾರದಿರುವಂತೆ ಕಟ್ಟುಪಾಡು ಮಾಡುವುದು, ಸಾಮಾಜಿಕ ವ್ಯವಸ್ಥೆಯ ಕರಾಳ ಮುಖವಾಗಿದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರ ಕುರಿತು ಪುರುಷ ಚಿಂತನೆಗಳು ಬದಲಾಗಬೇಕು. ಅದು ಆಧುನಿಕ ಮನೋಧರ್ಮದಿಂದ ಸಾಮಾಜಿಕ ವ್ಯವಸ್ಥೆಯನ್ನು ಪುನರ್‌ವಿಮರ್ಶೆಗೆ ಒಳಪಡಿಸಿದಾಗ, ಸಾಮಾಜಿಕವಾಗಿ ಮಹಿಳೆಯರು ಪುರುಷ ಸಮಾನ ಸಮಾನತೆಗಳನ್ನು ಪಡಯಬಹುದಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರು ಅಕ್ಷರಸ್ಥರಾಗಬೇಕು, ಉದ್ಯೋಗದಲ್ಲಿ ಪುರುಷ ಸಮಾನ ಮೀಸಲಾತಿಯನ್ನು ನೀಡಬೇಕು, ಸಂಪ್ರದಾಯದ ಕುರುಡು ಆಚರಣೆಗಳನ್ನು ನಿಲ್ಲಿಸಿ, ಮಹಿಳೆಯರ ಭಾವನೆಗಳಿಗೆ ಸ್ಪಂದಿಸುವಂತ ವಾತಾವರಣ ಸಮಾಜದಲ್ಲಿ ಸೃಷ್ಟಿಯಾದಾಗ ಆಧುನಿಕತೆಯ ಮನೋಭಾವನೆ ಸಮಾಜದಲ್ಲಿ ಬೇರೂರಿದೆ ಎಂದು ದೃಢವಾಗುತ್ತದೆ. ಗಂಡ–ಹೆಣ್ಣು ಈ ಸೃಷ್ಟಿಯಲ್ಲಿ ಸಮಾನರೆಂಬ ಮನೋಭಾವ ನೆಲೆಸುತ್ತದೆ. ಪ್ರಸ್ತುತ ದಿನಮಾನಗಳಲ್ಲಿ ಸಾಮಾನ್ಯವಾಗಿ ಪ್ರತಿ ಸಾಮಾಜಿಕ ಮೌಲ್ಯವೂ ಪುನರ್‌ವಿಮರ್ಶೆಗೆ ಒಳಗಾಗುತ್ತಿರುವುದು ಸಮಾಧಾನಕರವಾದ ಸಂಗತಿ. ಹೆಣ್ಣುಮಕ್ಕಳ ಅಸಮ್ಮತಿಯ ವಿವಾಹ ವ್ಯವಸ್ಥೆಯು, ಸಮ್ಮತಿಯ ವಿವಾಹವಾಗಿ ಬದಲಾಗುತ್ತಿರುವುದು. ವಿಧವಾ ವಿವಾಹಗಳು ಅಡ್ಡಿ ಆತಂಕವಿಲ್ಲದೆ ಪುರುಷ ಸಮಾನವಾಗಿ ನೆರವೇರುವುದು. ಉದ್ಯೋಗಕ್ಕೆ ಪುರುಷ ಸಮಾನ ಸಂಭಾವನೆ ಪಡೆಯುವುದು, ಮಹಿಳಾ ಆರೋಗ್ಯದ ಕಡೆ ಕಾಳಜಿ(ಸೀಮಿತ ಮಕ್ಕಳನ್ನು ಪಡೆಯುವುದು)ಯನ್ನು ವಹಿಸುತ್ತಿರುವುದು, ಶಿಕ್ಷಣ ಕ್ಷೇತ್ರದಲ್ಲಿ ಗಂಡುಮಕ್ಕಳನ್ನು ಹಿಂದಿಕ್ಕಿ, ಹೆಣ್ಣು ಮಕ್ಕಳು ಸಾಧನೆ ಮಾಡುತ್ತಿರುವುದು, ಆಧುನಿಕತೆಯ ಮನೋಧರ್ಮ ಪ್ರತಿಫಲವೆಂದೇ ಗುರುತಿಸಬೇಕಾಗಿದೆ.

ಒಟ್ಟಾರೆಯಾಗಿ ಸ್ತ್ರೀಯರನ್ನು ಕುರಿತ ಪುರುಷ ಚಿಂತನೆಗಳು ಬದಲಾಗಿದ್ದು, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಪುರುಷ ಸಮಾನ ಸ್ಥಾನಮಾನಗಳು ದೊರಕುತ್ತಿದ್ದು, ಸಾಮಾಜಿಕ ಮೌಲ್ಯಗಳು, ಪುನರ್‌ವಿಮರ್ಶೆಗೆ ಒಳಗಾಗಿ, ಆಧುನಿಕ ಸಮಾಜದ್ಲಲಿ ಮಹಿಳೆಯನ್ನು ಪುರುಷ

ಸಮಾನವಾಗಿ ಸ್ವೀಕರಿಸ ತೊಡಗಿರುವುದು ಸಮಾಧಾನಕರವಾದ ಸಂಗತಿಯಾಗಿದೆ. ಮಹಿಳಾ ಪರ ಕಾನೂನು, ಮಹಿಳಾ ಪರ ಸಂಘ ಸಂಸ್ಥೆಗಳು ಸಕ್ರಿಯವಾಗಿ ಜಾಗೃತಿ ಮೂಡುತ್ತಿರುವುದು, ಅಬಲೆಯಾಗಿದ್ದ, ಮಹಿಳೆ, ಆಧುನಿಕ ಚಿಂತನೆಗಳಿಂದ ಸದೃಢಳಾಗುವತ್ತ ಸಾಮಾಜಿಕ ಮೌಲ್ಯಗಳು ಬದಲಾಗಿವೆ. ಬದಲಾಗದ ಹೊರತು ಸಾಮಾಜಿಕ ನ್ಯಾಯ ಸರ್ವರಿಗೂ ಸಮಪಾಲು, ಸರ್ವರಿಗೂ ಸಮ ಬಾಳು ಎಂಬ ಪರಿಕಲ್ಪನೆ ನನಸಾಗದು.

**ಪರಾಮರ್ಶನ ಗ್ರಂಥಗಳು**


- ಅಮೂರ, ಜಿ.ಎಸ್. (೧೯೯೪). *ಕನ್ನಡ ಕಥನ ಸಾಹಿತ್ಯ ಕಾದಂಬರಿ.* ಸಪ್ನ ಬುಕ್‌ಹೌಸ್,
- ಶ್ರೀಮತಿ, ಎಚ್.ಎಸ್. (೨೦೧೨). *ಸ್ತ್ರೀವಾದಿ ಸಂಶೋಧನೆ ವಿಧಿ–ವಿಧಾನಗಳು.* ಬರಹ ಪಬ್ಲಿಷಿಂಗ್ ಹೌಸ್.
- ಶ್ರೀಮತಿ, ಎಚ್.ಎಸ್. (೨೦೦೬). ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
- ಶೈಲಜಾ ಶರಣಗೌಡ. (ಸಂ.). (೨೦೨೨) .ಮಹಿಳಾ ಸಾಹಿತ್ಯ. ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸರಸ್ವತಿ.